ವಿಷಯ: ಚಾಮರಾಜನಗರಕ್ಕೆ ಕುಡಿಯುವ ನೀರಿನ ಯೋಜನೆ.

1042 (1546)

ಶ್ರೀ ಎ.ಆರ್.ಕೃಷ್ಣಮೂರ್ತಿ (ಸಂತೇಮಾರಹಳ್ಳಿ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರಕ್ಕೆ ಕಾವೇರಿ ನದಿಯಿಂದ ಕುಡಿಯುವ ನೀರನ್ನು ಒದಗಿಸುವ ಯೋಜನೆಯ ಕಾರ್ಯ ಈಗ ಯಾವ ಹಂತದಲ್ಲಿದೆ ಹಾಗೂ ಇದರ ಅಂದಾಜು ವೆಚ್ಚವೆಷ್ಟು?

ಆ) ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):

ಅ) ಚಾಮರಾಜನಗರ ನೀರು ಸರಬರಾಜು ಯೋಜನೆಯ ಮೂಲಸ್ಥಾವರ ಕೊಳವೆ ಮಾರ್ಗ ನೀರು ಶುದ್ಧೀಕರಣಾಗಾರ ಹಾಗೂ ಒಂದು ಮೇಲ್ಮಟ್ಟದ ಜಲಸಂಗ್ರಹಾಗಾರಕ್ಕೆ ಗುತ್ತಿಗೆದಾರರನ್ನು ನೇಮಿಸಲಾಗಿದ್ದು, ಗುತ್ತಿಗೆದಾರರು ಮೂಲ ಸ್ಥಾವರದ ಉಳಿಕೆ ಕೆಲಸವನ್ನು ಈಗಾಗಲೇ ಪ್ರಾರಂಭಿಸಿರುತ್ತಾರೆ.

ಈ ಯೋಜನೆಯ ಅನುಮೋದನೆಯಾದ ಅಂದಾಜು ವೆಚ್ಚವು ರೂ. 615 ಲಕ್ಷಗಳಾಗಿರುತ್ತದೆ. ಪರಿಷ್ಕೃತ ಅಂದಾಜು ಸುಮಾರು ರೂ. 20.00 ಕೋಟಿಗಳಾಗುತ್ತದೆ.

ಆ) ಈ ಯೋಜನೆಯನ್ನು 1999ರ ಸೆಪ್ಟೆಂಬರ್ ತಿಂಗಳಲ್ಲಿ ಚಾಲನೆ ಮಾಡಲು ಉದ್ದೇಶಿಸಲಾಗಿದೆ.

ವಿಷಯ: ಚಾಮರಾಜನಗರವನ್ನು ಐಡಿಎಸ್‌ಎಂಟಿ ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸುವುದು.

1044 (1550)

ಶ್ರೀ ಎ.ಆರ್.ಕೃಷ್ಣಮೂರ್ತಿ (ಸಂತೇಮಾರಹಳ್ಳಿ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1998-99ನೇ ಸಾಲಿನಲ್ಲಿ ಚಾಮರಾಜನಗರ ಪ್ರದೇಶವು ಐಡಿಎಸ್‌ಎಂಟಿ, ಯೋಜನೆಗೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿ, ಮಂಜೂರಾತಿ ಕೋರಲಾಗಿದೆಯೇ (ವಿವರ ನೀಡುವುದು)?